# ರಾಮ ಮಂತ್ರವ ಜಪಿಸೊ ಏ ಮನುಜಾ

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 266.
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 160.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 502.
4. **Note:** Lyrics given without highlights are as per Ref. 1 and the lyrics given in yellow highlights are as per the singer.
5. **Note:** Lyrics given in grey highlights are as per Ref. 2 and lyrics green highlights are as per Ref. 3. All these lyrics are different and hence they are given separately. The one given in yellow highlights are as per the singer.

ರಾಗ: ಮಧ್ಯಮಾವತಿ ತಾಳ: ಆದಿ

| | |
|---|---|
| ರಾಮ ಮಂತ್ರವ ಜಪಿಸೊ ಏ ಮನುಜಾ | ರಾಮ ಮಂತ್ರವ ಜಪಿಸೊ ಏ ಮನುಜಾ |
| ರಾಮ ಮಂತ್ರವ ಜಪಿಸೊ ॥ ಪ ॥ | ರಾಮ ಮಂತ್ರವ ಜಪಿಸೊ |
| | |
| ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡಬೇಡ | ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡಬೇಡ |
| ಸೋಮಶೇಖರ ತನ್ನ ಸತಿಗೆ ಪೇಳಿದ ಮಂತ್ರ ॥ ಅಪ ॥ | ಸೋಮಶೇಖರ ತನ್ನ ಸತಿಗೆ ಪೇಳಿದ ಮಂತ್ರ |
| | |
| ಕುಲಹೀನನಾದರು ಕೂಗಿ ಜಪಿಸುವ ಮಂತ್ರ | ಕುಲಹೀನನಾದರು ಕೂಗಿ ಜಪಿಸುವ ಮಂತ್ರ |
| ಜಲಜಪಾಣಿ ನಿತ್ಯ ಜಪಿಪ ಮಂತ್ರ | ಸಲೆ ಬೀದಿ ಬೀದಿಯೊಳು ನುಡಿವ ಮಂತ್ರ |
| ಕಲುಷ ಪರ್ವತಕಿದು ಕುಲಿಶವಾಗಿಹ ಮಂತ್ರ | ಹಲವು ಪಾಪಂಗಳ ಹತಗೊಳಿಸುವ ಮಂತ್ರ |
| ಸುಲಭದಿಂದಲಿ ಮೋಕ್ಷ ಸೂರೆಗೊಂಬುವ ಮಂತ್ರ ॥ 1 ॥ | ಸುಲಭದಿಂದಲಿ ಸ್ವರ್ಗ ಸೂರೆಗೊಂಬುವ ಮಂತ್ರ |
| | |
| ಸ್ನಾನ ಮೌನಂಗಳಿಗೆ ಸಾಧನದ ಮಂತ್ರ | ಸ್ನಾನ ಮೌನಂಗಳಿಗೆ ಸಾಧನದ ಮಂತ್ರ |
| ಜ್ಞಾನಿಗಳು ಮನದಿ ಧ್ಯಾನಿಪ ಮಂತ್ರ | ಜ್ಞಾನಿಗಳು ಮನದಿ ಧ್ಯಾನಿಪ ಮಂತ್ರ |
| ಹೀನ ಗುಣಂಗಳ ಹಿಂಗಿಸುವ ಮಂತ್ರ | ಹೀನ ಗುಣಂಗಳ ಹಿಂಗಿಸುವ ಮಂತ್ರ |
| ಏನೆಂಬೆ ವಿಭೀಷಣಗೆ ಪಟ್ಟಗಟ್ಟಿದ ಮಂತ್ರ ॥ 2 ॥ | ಏನೆಂಬೆ ವಿಭೀಷಣಗೆ ಪಟ್ಟಗಟ್ಟಿದ ಮಂತ್ರ |
| | |
| ಸಕಲ ವೇದಂಗಳಿಗೆ ಸಾರವಾಗಿಹ ಮಂತ್ರ | ಸಕಲ ವೇದಂಗಳಿಗೆ ಸಾರವೆನಿಪ ಮಂತ್ರ |
| ಮುಕುತಿ ಮಾರ್ಗಕೆ ಇದೇ ಮೂಲ ಮಂತ್ರ | ಮುಕುತಿ ಮಾರ್ಗಕೆ ಇದೇ ಮೂಲ ಮಂತ್ರ |

| | |
|---|---|
| ಭಕುತಿ ರಸಕೆ ಬಟ್ಟೆ ಒಮ್ಮೆ ತೋರುವ ಮಂತ್ರ | ಭಕುತಿ ರಸಕೆ ಬಟ್ಟೆ ಒಮ್ಮೆ ತೋರುವ ಮಂತ್ರ |
| ಸುಖನಿಧಿ ಪುರಂದರ ವಿಠಲನ ಮಹಾ ಮಂತ್ರ ॥ 3 ॥ | ಸುಖನಿಧಿ ಪುರಂದರ ವಿಠಲನ ಮಂತ್ರ |

**Note:** For below given lyrics, please refer Note No. 5 above.

ರಾಗ: ಮಧ್ಯಮಾವತಿ ತಾಳ: ಆದಿ

| | |
|---|---|
| ರಾಮ ಮಂತ್ರವ ಜಪಿಸೊ ಏ ಮನುಜ | ರಾಮ ಮಂತ್ರವ ಜಪಿಸೊ ಹೇ ಮನುಜ |
| ಶ್ರೀ ರಾಮ ಮಂತ್ರವ ಜಪಿಸೊ ॥ ಪ ॥ | |
| | |
| ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡಲು ಬೇಡ | ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡ ಬೇಡ |
| ಸೋಮಶೇಖರಗಿದು ಭಜಿಸಿ ಬಾಳುವ ಮಂತ್ರ ॥ ಅಪ ॥ | ಸೋಮಶೇಖರ ತನ್ನ ಭಾಮಿನಿಗೊರೆದಿಹ |
| | |
| ಕುಲಹೀನನಾದರೂ ಕೂಗಿ ಜಪಿಸುವ ಮಂತ್ರ | ಕುಲಹೀನನಾದರೂ ಕೂಗಿ ಜಪಿಸುವ ಮಂತ್ರ |
| ಛಲದಿ ಬೀದಿಯೊಳು ಉಚ್ಚರಿಪ ಮಂತ್ರ | ಸಲೆ ಬೀದಿ ಬೀದಿಯೊಳು ಉಚ್ಚರಿಪ ಮಂತ್ರ |
| ಹಲವು ಪಾತಕಗಳ ಹಸಗೆಡಿಸುವ ಮಂತ್ರ | ಹಲವು ಪಾಪಂಗಳ ಹದಗೆಡಿಸುವ ಮಂತ್ರ |
| ಸುಲಭದಿಂದಲಿ ಸ್ವರ್ಗ ಸೂರೆ-ಗೊಂಬುವ ಮಂತ್ರ ॥ 1 ॥ | ಸುಲಭದಿಂದಲಿ ಸ್ವರ್ಗ ಸೂರೆ-ಗೊಂಬುವ ಮಂತ್ರ |
| | |
| ಸನು ಮುನಿಗಳಿಗೆಲ್ಲ ಸಲುಗೆಯಾಗಿಹ ಮಂತ್ರ | ಮರುತಾತ್ಮಜ ನಿತ್ಯ ಸ್ಮರಣೆ ಮಾಡುವ ಮಂತ್ರ |
| ಮನು ಮುನಿಗಳಿಗೆಲ್ಲ ಮೌನ ಮಂತ್ರ | ಸರುವ ಋಷಿಗಳಲ್ಲಿ ಸೇರಿದ ಮಂತ್ರ |
| ಹೀನ ಗುಣಗಳೆಲ್ಲ ಹಿಂಗಿ ಹೋಗುವ ಮಂತ್ರ | ದುರಿತ ಕಾನಾನಕಿದು ದಾವಾನಲ ಮಂತ್ರ |
| ಏನೆಂಬೆ ಧ್ರುವನಿಗೆ ಪಟ್ಟಗಟ್ಟಿದ ಮಂತ್ರ ॥ 2 ॥ | ಪೊರೆದು ವಿಭೀಷಣಗೆ ಪಟ್ಟಗಟ್ಟಿದ ಮಂತ್ರ |
| | |
| ಸಕಲ ವೇದಗಳಿಗೆ ಸಾರವಾಗಿಹ ಮಂತ್ರ | ಜ್ಞಾನ-ನಿಧಿ ನಮ್ಮ ಆನಂದ-ತೀರ್ಥರು |
| ಮುಕುತಿ ಪಥಕೆ ಇದು ಮೂಲ ಮಂತ್ರ | ಸಾನುರಾಗದಿ ನಿತ್ಯ ಸೇವಿಪ ಮಂತ್ರ |
| ಶಕುತಪರಕೆ ಇದು ಬಟ್ಟೆ ದೊರುವ ಮಂತ್ರ | ಭಾನುಕುಲಾಂಬುಧಿ ಸೋಮನೆನಿಪ ನಮ್ಮ |
| ಸುಖ-ನಿಧಿ ಪುರಂದರ ವಿಠ್ಠಲ ಮಹಾ ಮಂತ್ರ ॥ 3 ॥ | ದೀನ ರಕ್ಷಕ ಪುರಂದರ ವಿಠ್ಠಲನ ಮಂತ್ರ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಸೋಮಶೇಖರ** – ಶಿವನು ಪಾರ್ವತಿಗೆ ಹೇಳಿದ ಮಂತ್ರ - ಶ್ರೀ ರಾಮ ರಾಮೇತಿ ರಮೇ ರಾಮೇ ಮನೋರಮೆ ..... ವರಾನನೆ

**ಜಲಜಪಾಣಿ** – ತಾವರೆಯನ್ನು ಕೈಯಲ್ಲಿ ಹಿಡಿದ ಲಕ್ಷ್ಮಿ.

**ಕಲುಷ ಪರ್ವತ...** – ಪಾಪವೆಂಬ ಬೆಟ್ಟವನ್ನು ಸೀಳುವ ವಜ್ರಾಯುಧ (ಕುಲಿಶ).

**ಬಟ್ಟೆ** – ದಾರಿ (ಬಾಟೆ, ವಾಟ, ಪಂಥ, ವರ್ತ್ಮ).

**ಛಲ** = ಹಠ

**ಸಲುಗೆಯಾಗಿಹ** = ರೂಢಿಯಾದ

**ಮೌನ ಮಂತ್ರ** = ಮೌನದಲ್ಲಿ ಜಪಿಸುವ ಮಂತ್ರ

**ಸಕಲ ವೇದ ..... ಮಂತ್ರ** = ಎಲ್ಲಾ ವೇದಗಳೂ ವಿಷ್ಣು ಶಬ್ದ ವಾಚ್ಯವಾಗಿವೆಯೆಂದು ಪರಂಪರೆ ಹೇಳುತ್ತದೆ

**ಶಕುತಪರ** = ಸಮರ್ಥವಾದ ಪರಲೋಕ

**Classification:** Keerthane
**Ankita:** purandara vittala
**Location:** NA
**Category:** Jeevanoddhara, Nama Mahatme, Aartha Bhava.
**Sub-Category:** rama, japa, shiva, patni, padma, Lakshmi, moksha, mukti, snana, jnana, Dhyana, Vibhishana, madhwacharya, madhva, nitya, mana, veda, sukha, bhajane, Swarga, muni, guna,
**Pravachana:** NA
**Explanation:** NA